ಕೊಳವೆ ಬಾವಿಗಳಲ್ಲಿ ನೀರು ಬತ್ತಿಹೋಗದಂತೆ ಅಂತರಜಲಮಟ್ಟ ಕಾಯ್ದುಕೊಳ್ಳುವುದು

2339(2830) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) :— ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕೊಳವೆ ಬಾವಿಗಳಲ್ಲಿ ನೀರು ಬತ್ತಿ ಹೋಗದಂತೆ ಅಂತರ ಜಲಮಟ್ಟವನ್ನು ಕಾಪಾಡಿಕೊಳ್ಳಲು ಹಾಗೂ ರೀಚಾರ್ಜ್ ಮಾಡಲು ಇಲಾಖಾವತಿಯಿಂದ ಕೈಗೊಂಡಿರುವ ಕ್ರಮವೇನು?

ಆ) ಮೈಸೂರು ಜಿಲ್ಲೆಯಲ್ಲಿ ಹಾಗೂ ತಾಲ್ಲೂಕಿನಲ್ಲಿ ಈ ರೀತಿ ಅಂತರ್ ಜಲಮಟ್ಟ ಕಾಪಾಡಲು ಖಾಸಗಿಯವರು ಮುಂದೆ ಬಂದಲ್ಲಿ ಅವರಿಗೆ ಅವಕಾಶ ನೀಡಿ ಪ್ರೋತ್ಸಾಹ ನೀಡಲಾಗುವುದೇ?

ಇ) ಈ ರೀತಿ ಅಂತರ್‌ಜಲ ಮಟ್ಟ ಕಾಪಾಡಲು ಖಾಸಗಿಯವರು ಮುಂದೆ ಬಂದರೆ ಅವರಿಗೆ ದೊರೆಯುವ ಪ್ರೋತ್ಸಾಹವೇನು?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು) :—

ಅ) ಕಳೆದ 6 ವರ್ಷಗಳಿಂದ ಕ್ಲಿಷ್ಟಕರವೆಂದು ವರ್ಗೀಕರಣ ಮಾಡಿರುವ ತಾಲ್ಲೂಕುಗಳಲ್ಲಿ ಒಟ್ಟು 464 ಅಂತರ್ಜಲ ಕೃತಕ ಮರು ಪೂರ್ಯಕೆಯ ರಚನೆಗಳನ್ನು ನಿರ್ಮಾಣ ಮಾಡಲಾಗಿದೆ. ಅಂತರ್ಜಲವನ್ನು ವೃದ್ಧಿಪಡಿಸುವ ಸಲುವಾಗಿ ಜಲ ಸಂಪನ್ಮೂಲ ಕ್ರೋಢೀಕರಣ ಯೋಜನೆ "Water Resources Consolidation Project" (Ground water Component) ಯಡಿಯಲ್ಲಿ ಒಟ್ಟು 82,000 ಅಂತರ್ಜಲ ಕೃತಕ ಮರುಪೂರ್ಯಕೆ ರಚನೆಗಳನ್ನು 72 ಕ್ಲಿಷ್ಟಕರ ತಾಲ್ಲೂಕುಗಳಲ್ಲಿ ಒಟ್ಟು 850 ಕೋಟಿ ರೂಪಾಯಿ ವೆಚ್ಚದಲ್ಲಿ ರಚಿಸಲು ಪ್ರಸ್ತಾವನೆಯನ್ನು ವಿಶ್ವ ಬ್ಯಾಂಕ್‌ಗೆ ಧನ ಸಹಾಯಕ್ಕಾಗಿ ಸಲ್ಲಿಸಲಾಗಿದೆ. ತದನಂತರ ರಾಜ್ಯದ ಅಚ್ಚುಕಟ್ಟು ಪ್ರದೇಶಗಳನ್ನು ಹೊರತುಪಡಿಸಿ ರೂ. 471.00ಕೋಟಿ ವೆಚ್ಚದ ಒಂದು ಯೋಜನೆಯನ್ನು ರಾಜ್ಯದ 58 ತಾಲ್ಲೂಕುಗಳಿಗೆ ಸೀಮಿತಗೊಳಿಸಿ ಒಟ್ಟು 50,221 ವಿವಿಧ ರಚನೆಗಳನ್ನು ಮುಂದಿನ 5 ವರ್ಷಗಳಲ್ಲಿ ನಿರ್ಮಾಣಮಾಡುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

ಆ) ಹೌದು.

ಇ) ಎಲ್ಲಾ ಮಾಹಿತಿ ಮತ್ತು ತಾಂತ್ರಿಕ ಸಲಹೆಯನ್ನು ನೀಡಲಾಗುವುದು.